24/06/2020

ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್‌ಇಆರ್‌ಟಿ
DSERT

Phone - 080 26980100
Fax - 080 26422377

ಸಂಖ್ಯೆ : ಒಬಿ1.(ಒಬಿ5)ಗ.ಯ.ಆ.01/2020-21 ದಿನಾಂಕ : 22-06-2020

## ದರಪಟ್ಟಿ ಆಹ್ವಾನಿಸಿ ಪ್ರಕಟಣೆ

ವಿಷಯ : ಡಿ.ಎಸ್.ಇ.ಆರ್.ಟಿ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸಕೆರೆಹಳ್ಳಿ ಬೆಂಗಳೂರು-85 ಇಲ್ಲಿನ ಗಣಕ ಯಂತ್ರಗಳಿಗೆ ಆ್ಯಂಟಿ-ವೈರಸ್ ಅಳವಡಿಸುವ ಬಗ್ಗೆ.

=000=

ವಿಷಯಕ್ಕೆ ಸಂಬಂಧಿಸಿದಂತೆ ಡಿ.ಎಸ್.ಇ.ಆರ್.ಟಿ. ಕಛೇರಿ, ಸಾ.ಶಿ.ಇಲಾಖೆ, #4, 100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085. ಕಛೇರಿಯಲ್ಲಿನ ಅಂದಾಜು 60 ಗಣಕ ಯಂತ್ರಗಳಿಗೆ ಆ್ಯಂಟಿ-ವೈರಸ್ ಅಳವಡಿಸಲು ಅರ್ಹ ಸರಬರಾಜುದಾರರಿಂದ ದರ-ಪಟ್ಟಿ (ಕೊಟೇಶನ್) ಯನ್ನು ಕರೆಯಲಾಗಿದೆ.

ಆಸಕ್ತ ಸರಬರಾಜುದಾರರು ಬಂದು ಪರಿಶೀಲಿಸಿ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟವಾದ 7 ದಿವಸಗಳೊಳಗಾಗಿ ಕಛೇರಿಯ ವಿಳಾಸ 'ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಇಲಾಖೆ, ಹೊಸಕೆರೆಹಳ್ಳಿ ಬೆಂಗಳೂರು-85' ಇಲ್ಲಿಗೆ ತಲುಪುವಂತೆ ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ಸಲ್ಲಿಸತಕ್ಕದ್ದು. ಸ್ವೀಕೃತಿ ವಿಳಂಬಕ್ಕೆ ಈ ಸಂಸ್ಥೆಯು ಜವಾಬ್ದಾರಿಯಲ್ಲ.

ಲಕೋಟೆಯ ಮೇಲೆ ಕಡ್ಡಾಯವಾಗಿ **'ಗಣಕ ಯಂತ್ರಗಳಿಗೆ ಆ್ಯಂಟಿ-ವೈರಸ್ ಅಳವಡಿಸುವ ಬಗ್ಗೆ ದರಪಟ್ಟಿ'** ಎಂದು ನಮೂದಿಸಿರತಕ್ಕದ್ದು.

**ನಿಬಂಧನೆಗಳು:**

1) ಕೋಟೇಶನ್ ಗಳು ಕೆಟಿಪಿಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು. ಸರಬರಾಜಿಗೆ ಯಾವುದೇ ಮುಂಗಡ ನೀಡಲಾಗುವುದಿಲ್ಲ
2) ಸರಬರಾಜುದಾರ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
3) 1 ವರ್ಷದ ಅವಧಿಯ / 3 ವರ್ಷದ ಅವಧಿಯ ಆ್ಯಂಟಿ-ವೈರಸ್ ದರಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು. ದರಗಳು ಎಲ್ಲಾ ಶಾಸನಬದ್ಧ ತೆರಿಗೆಗಳನ್ನು ಒಳಗೊಂಡಂತೆ ಇರತಕ್ಕದ್ದು.
4) ಸರಬರಾಜು ಬಿಲ್ಲು ಸ್ವೀಕೃತವಾದ ದಿನಾಂಕದಿಂದ ಕನಿಷ್ಟ 20 ರಿಂದ 30 ದಿನಗಳ ಒಳಗಾಗಿ ಕೆ-2, ಇ-ಪಾವತಿ ಮುಖಾಂತರದಲ್ಲಿ ಪರಿಶೀಲಿಸಿ ನಿಯಮಾನುಸಾರ ಪಾವತಿ ಕ್ರಮಗಳನ್ನು ಕೈಗೊಳ್ಳಲಾಗುವುದು.
5) ಕೊಟೇಶನ್ ಪರಿಶೀಲಿಸಿದ ನಂತರದಲ್ಲಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ
ಮತ್ತು ತರಬೇತಿ ಇಲಾಖೆ,